# ಧರ್ಮ ಸಾಮರಸ್ಯ



❀ ಎಲ್ಲಾ ಮಾರ್ಗಗಳಿಂದಲೂ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು. ಎಲ್ಲಾ ಧರ್ಮಗಳೂ ಸತ್ಯವಾದುವೆ. ನಮ್ಮ ಮುಖ್ಯವಾದ ಕರ್ತವ್ಯ ಚಾವಣಿಗೆ ಹತ್ತಿ ಹೋಗುವುದು. ಆ ಕಾರ್ಯವನ್ನು ಮೆಟ್ಟಿಲ ಸಾಲಿನಿಂದಾಗಲಿ, ಬೊಂಬಿನ ಏಣಿಯಿಂದಾಗಲಿ ಅಥವಾ ಒಂದು ಹಗ್ಗದಿಂದಾಗಲಿ ಸಾಧಿಸಬಹುದು. ಅಷ್ಟೇ ಅಲ್ಲ , ಕೇವಲ ಬೊಂಬಿನಿಂದಲೇ ಹತ್ತಿಬಿಡಬಹುದು.

❀ ನೀವು ಹೇಳಬಹುದು. ಪರರ ಧರ್ಮಗಳಲ್ಲಿ ಅನೇಕ ಕುಂದುಕೊರತೆಗಳಿವೆ ಎಂಬುದಾಗಿ. ನನ್ನ ಉತ್ತರ: ಇದ್ದರೆ ತಾನೆ ಏನು? ಪ್ರತಿಯೊಂದು ಧರ್ಮದಲ್ಲೂ ಇದ್ದೇ ಇದೆ. ಎಲ್ಲರೂ ಭಾವಿಸುತ್ತಾರೆ ತಮ್ಮ ಗಡಿಯಾರ ಸರಿಯಾಗಿ ನಡೆದುಕೊಂಡು ಹೋಗುತ್ತಿದೆ ಎಂಬುದಾಗಿ. ಅಂತರ್ಯದಲ್ಲಿ ವ್ಯಾಕುಲತೆ ಇದ್ದರೇ ಯಥೇಷ್ಟ. ಭಗವಂತನಲ್ಲಿ ಪ್ರೀತಿ ಇದ್ದರೆ ಸಾಕು. ಆತ ಅಂತರ್ಯಾಮಿ. ನಮ್ಮ ಅಂತರ್ಯದಲ್ಲಿರುವ ಪ್ರೀತಿ ವ್ಯಾಕುಲತೆ ಏನು ಎಂಬುದನ್ನುಆತ ಅರಿತುಕೊಳ್ಳಬಲ್ಲ. ಉದಾಹರಣೆಗೆ ಒಬ್ಬನಿಗೆ ಅನೇಕ ಮಕ್ಕಳು ಅಂತ ಇಟ್ಟುಕೊಳ್ಳಿ. ದೊಡ್ಡ ಮಕ್ಕಳು ಆತನನ್ನು ಸ್ಪಷ್ಟವಾಗಿ 'ಅಪ್ಪ' 'ಅಯ್ಯ' ಎಂಬುದಾಗಿ ಕರೆಯುತ್ತವೆ. ಆದರೆ ಎಳೆಯ ಮಕ್ಕಳು ಅತಿ ಹೆಚ್ಚೆಂದರೆ 'ಪಾ,' 'ಯಾ' ಎಂಬುದಾಗಿ ಕರೆಯಬಲ್ಲುವು. ಈ ರೀತಿ ಅಸ್ಪಷ್ಟವಾಗಿ ಮಾತನಾಡುವ ಮಕ್ಕಳ ಮೇಲೆ ತಂದೆ ಕೋಪಿಸಿಕೊಳ್ಳುತ್ತಾನೇನು? ತಂದೆಗೂ ಗೊತ್ತಿದೆ ಅವೂ ತನ್ನನ್ನೇ ಕರೆಯುತ್ತಿವೆ, ಆದರೆ ಅವಕ್ಕೆ ತನ್ನ ಹೆಸರನ್ನು ಸ್ಪಷ್ಟವಾಗಿ ಉಚ್ಚರಿಸಲು ಸಾಧ್ಯವಾಗುತ್ತಿಲ್ಲ ಎಂಬುದಾಗಿ. ತಂದೆಗೆ ಎಲ್ಲಾ ಮಕ್ಕಳೂ ಒಂದೇ ಸಮ. ಹಾಗೆಯೇ ಭಕ್ತರೂ ಆತನನ್ನೇ ಕರೆಯುತ್ತಾರೆ, ಆದರೆ ವಿವಿಧ ಹೆಸರುಗಳಿಂದ. ಎಲ್ಲರೂ ಆ ಒಬ್ಬನನ್ನೇ ಕರೆಯುತ್ತಿರುವುದು. ಭಗವಂತ ಒಬ್ಬನೇ, ಆದರೆ ಆತನಿಗೆ ಹೆಸರು ಮಾತ್ರ ಅನೇಕ.

❀ ಇದು ನೀರೆಂಬ ಒಂದೇ ವಸ್ತುವನ್ನು ವಿವಿಧ ಭಾಷೆಗಳಲ್ಲಿ ವಿವಿಧ ಹೆಸರಿನಿಂದ ಕರೆದ ಹಾಗೆ. ಒಂದು ಕೊಳಕ್ಕೆ ಮೂರು ನಾಲ್ಕು ಘಟ್ಟಗಳಿವೆ ಅಂತ ಇಟ್ಟುಕೊಳ್ಳಿ. ಒಂದು ಘಟ್ಟದಲ್ಲಿ ಹಿಂದೂಗಳು ನೀರು ಕುಡಿಯುತ್ತಾರೆ. ಅವರು ಅದಕ್ಕೆ 'ಜಲ' ಅಂತ ಕರೆಯುತ್ತಾರೆ. ಇನ್ನೊಂದರಲ್ಲಿ ಮುಸಲ್ಮಾನರು ನೀರು ಕುಡಿಯುತ್ತಾರೆ. ಅವರು ಅದನ್ನು ಕರೆಯುತ್ತಾರೆ, 'ಪಾನಿ' ಅಂತ. ಮತ್ತೊಂದರಲ್ಲಿ ಆಂಗ್ಲೇಯರು ನೀರು ಕುಡಿಯುತ್ತಾರೆ. ಅವರು ಅದಕ್ಕೆ ಹೇಳುತ್ತಾರೆ 'ವಾಟರ್' ಎಂಬುದಾಗಿ. ಈ ಮೂವರು ಕುಡಿಯುವುದೂ ನೀರೇ, ಆದರೆ ಹೆಸರಿನಲ್ಲಿ ಮಾತ್ರ ಪ್ರಭೇದ. ಹಾಗೆಯೇ ಕೆಲವರು ಭಗವಂತನನ್ನು 'ಅಲ್ಲಾ,' ಇನ್ನು ಕೆಲವರು 'ಗಾಡ್', ಮತ್ತೆ ಕೆಲವರು 'ಬ್ರಹ್ಮ', ಮತ್ತು ಕೆಲವರು 'ಕಾಳಿ', ಇನ್ನೂ ಬೇರೆಬೇರೆಯವರು 'ರಾಮ', 'ಹರಿ', 'ಯೇಸು', 'ದುರ್ಗಾ' ಎಂಬಿವೇ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ.

❀ ಒಂದು ಕತೆ ಕೇಳು. ಒಮ್ಮೆ ಒಬ್ಬ ಒಂದು ತೋಪಿನ ಕಡೆ ಹೋಗಿದ್ದ. ಅಲ್ಲಿ ಒಂದು ಮರದ ಮೇಲೆ ಒಂದು ಪ್ರಾಣಿ ಕಾಣಿಸಿಕೊಂಡಿತು. ಆತ ಬಂದು ಇನ್ನೊಬ್ಬನಿಗೆ ಹೇಳಿದ: ''ನೋಡು, ಆ ಮರದ ಮೇಲೆ ಒಂದು ಕೆಂಪು ಬಣ್ಣದ ಪ್ರಾಣಿಯನ್ನು ನೋಡಿ ಬಂದೆ.'' ಅವನು ಹೇಳಿದ: ''ನಾನು ಅಲ್ಲಿ ಹೋಗಿದ್ದಾಗ, ನಾನೂ ಅದನ್ನು ನೋಡಿ ಬಂದಿದ್ದೇನೆ; ಅದು ಕೆಂಪು ಏಕಾದೀತು? ಹಸುರು,'' ಅವರ ಹತ್ತಿರ ನಿಂತಿದ್ದ ಮತ್ತೊಬ್ಬ ಹೇಳಿದ: ''ಇಲ್ಲ ಇಲ್ಲ, ಅದನ್ನು ನಾನೂ ನೋಡಿದ್ದೇನೆ. ಅದರ ಬಣ್ಣ ಹಳದಿ.'' ಹೀಗೆ ಅಲ್ಲಿ ನಿಂತಿದ್ದವರು ಅದರ ಬಣ್ಣ ಬೂದು, ನೇರಳೆ ಹಣ್ಣಿನ ಬಣ್ಣ , ನೀಲಿ ಇತ್ಯಾದಿಯಾಗಿ ಹೇಳಲಾರಂಭಿಸಿದರು. ಕೊನೆಗೆ ಒಬ್ಬರಿಗೊಬ್ಬರಿಗೆ ಜಗಳ ಹತ್ತಿಕೊಂಡುಬಿಟ್ಟಿತು. ಇದರ ಸಂಬಂಧವಾಗಿ ಒಂದು ಇತ್ಯರ್ಥಕ್ಕೆ ಬರಲು ಎಲ್ಲರೂ ಆ ಮರದ ಹತ್ತಿರಕ್ಕೆ ಹೋದರು. ಒಬ್ಬ ಮನುಷ್ಯ ಆ ಮರದ ಕೆಳಗೆ ಕುಳಿತುಕೊಂಡಿದ್ದುದು ಅವರ ಕಣ್ಣಿಗೆ ಬಿತ್ತು. ಆತನನ್ನು ಆ ಪ್ರಾಣಿಯ ಬಣ್ಣದ ಸಂಬಂಧವಾಗಿ ಕೇಳಲಾಗಿ ಆತ ಹೇಳಿದ: ''ನಾನು ಈ ಮರದ ಕೆಳಗೇ ವಾಸಿಸುತ್ತಿದ್ದೇನೆ. ಆ ಪ್ರಾಣಿಯ ಸ್ವರೂಪ ನನಗೆ ಬಹಳ ಚೆನ್ನಾಗಿ ಗೊತ್ತಿದೆ. ನೀವು ಪ್ರತಿಯೊಬ್ಬರು ಹೇಳುತ್ತಿರುವುದೂ ಸತ್ಯವೆ. ಕೆಲವು ವೇಳೆ ಅದು ಕೆಂಪಾಗಿ, ಇನ್ನು ಕೆಲವು ವೇಳೆ ಹಸುರಾಗಿ, ಮತ್ತೆ ಕೆಲವು ವೇಳೆ ಹಳದಿಯಾಗಿ, ಮತ್ತೂ ಕೆಲವು ವೇಳೆ ನೀಲಿಯಾಗಿ, ಹೀಗೇ ಇನ್ನೂ ಏನೇನೋ ಬಣ್ಣಗಳಾಗಿ ಕಾಣಿಸಿಕೊಳ್ಳುತ್ತದೆ. ಅದಕ್ಕೆ ಗೋಸುಂಬೆ ಅಂತ ಹೆಸರು. ಒಂದೊಂದು ವೇಳೆ ಅದಕ್ಕೆ ಯಾವ ಬಣ್ಣವೂ ಇರುವುದೇ ಇಲ್ಲ. ಕೆಲವು ವೇಳೆ ಅದು ಸಗುಣ, ಇನ್ನು ಕೆಲವು ವೇಳೆ ನಿರ್ಗುಣ.''

ಇದೇ ರೀತಿ ಯಾರು ಸರ್ವದಾ ಭಗವಚ್ಚಿಂತನೆ ಮಾಡುತ್ತಾ ಇರುತ್ತಾರೋ ಆತನಿಗೆ ಗೊತ್ತಾಗುತ್ತದೆ ಆತನ ನಿಜಸ್ವರೂಪ ಏನು ಎಂಬುದು. ಆತನಿಗೆ ಮಾತ್ರವೇ ಗೊತ್ತಿರುತ್ತದೆ, ಭಗವಂತ ನಾನಾ ರೂಪಗಳಿಂದ, ನಾನಾ ಭಾವಗಳಿಂದ ಕಾಣಿಸಿಕೊಳ್ಳುತ್ತಾನೆ – ಆತ ಸಗುಣನೂ ಹೌದು, ನಿರ್ಗುಣನೂ ಹೌದು ಎಂಬುದು. ಕೇವಲ ಆ ಮರದ ಕೆಳಗೆ ವಾಸಿಸುತ್ತಿರುವವನಿಗೆ ಮಾತ್ರ ಗೊತ್ತಿರುತ್ತದೆ, ಗೋಸುಂಬೆ ವಿವಿಧ ಬಣ್ಣಗಳನ್ನು ಧರಿಸುತ್ತದೆ ಮತ್ತು ಕೆಲವು ವೇಳೆ ಅದಕ್ಕೆ ಯಾವ ಬಣ್ಣವೂ ಇರದು ಎಂಬುದು. ಉಳಿದವರು ಬರಿದೆ ವಾದ–ವಿವಾದ, ಜಗಳ–ಬವರ ಇವುಗಳಲ್ಲಿ ತೊಡಗಿ ಸತ್ತು ಸುಣ್ಣವಾಗಿ ಹೋಗುತ್ತಾರೆ.

❀ ವಸ್ತು ಮಾತ್ರ ಒಂದೇ, ಹೆಸರು ಮಾತ್ರ ವಿವಿಧ. ಯಾರು ಬ್ರಹ್ಮನೋ, ಆತನೇ ಆತ್ಮ, ಆತನೇ ಭಗವಂತ. ಜ್ಞಾನಮಾರ್ಗಿಗಳ ಬ್ರಹ್ಮನೇ ಯೋಗಿಗಳ ಪರಮಾತ್ಮ, ಭಕ್ತರ ಭಗವಂತ. ಒಂದರಲ್ಲಿ ವಿಶ್ವಾಸವಿದ್ದರೆ ಅದೇ ಯಥೇಷ್ಟ.

ಶ್ರೀರಾಮಕೃಷ್ಣ ವಚನವೇದದಿಂದ

# ನಾ ಮಾಡಿದಾ ಕರ್ಮ...

ಜೆ. ಶಶಿಧರ್, ಬೆಂಗಳೂರು



ನಮ್ಮ ಜೀವನದಲ್ಲಿ ಅತ್ಯಂತ ಪರಿಣಾಮ ಬೀರುವ ಕರ್ಮನಿಯಮ ಎಷ್ಟು ಅಬಾಧ್ಯವೋ, ಅದನ್ನರಿತು ಜೀವನ ನಡೆಸಿದರೆ ಆ ನಿಯಮವೇ ಮುಕ್ತದಾಯಕವಾಗುವುದು. ಈ ವಿಚಾರವನ್ನು ವಿವರಿಸಿರುವ ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

**ಮಾಡುವುದನೆಲ್ಲ ಮಾಡಿದ ಮೇಲೆ**
**ಇನ್ನೇತಕೆ ಪರಿತಾಪ**
**ಬೇವಿನ ಮರವನು ಬೆಳೆಸಿದ ಮೇಲೆ ನಿನಗೆ**
**ಮಾವು ದೊರಕುವುದೇ ।।ಕಬೀರ।।**

ಸಂತ ಕಬೀರದಾಸರು ಈ ರೀತಿಯ ಅನೇಕ ಮನಮುಟ್ಟುವಂತಹ ದೋಹೆಗಳನ್ನು ರಚಿಸಿ ಜನಮಾನಸದಲ್ಲಿ ಅಮರರಾಗಿದ್ದಾರೆ. ಇದು ಮೂಲತಃ ಹಿಂದೀ ಭಾಷೆಯಲ್ಲಿದೆ. ರಾಮಕೃಷ್ಣ ಮಠದ ಹಿರಿಯ ಸಂನ್ಯಾಸಿಗಳೊಬ್ಬರು ಅದನ್ನು ಕನ್ನಡಕ್ಕೆ ಭಾಷಾಂತರಗೊಳಿಸಿ, ಕರ್ನಾಟಕದ ಜನ ಇದರ ಮಹತ್ತ್ವವನ್ನು ಅರಿತು ಪರಿಶುದ್ಧ ಜೀವನ ನಡೆಸಲು ಪ್ರೇರಣೆ ಸಿಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಸಾಮಾನ್ಯವಾಗಿ ಪ್ರತಿಯೊಂದು ಜೀವಿಯೂ ಕರ್ಮಕ್ಕೆ ಅನುಗುಣವಾಗಿ ಹುಟ್ಟು-ಸಾವು, ಲಾಭ-ನಷ್ಟ, ಸುಖದುಃಖ ಇವೆಲ್ಲವನ್ನೂ ಅನುಭವಿಸಿಯೇ ತೀರಬೇಕು. ಕೆಲವರು ಮಾತ್ರ ಇದರ ಮರ್ಮವನ್ನು ಅರಿತು, ಗುರುಕೃಪೆಯಿಂದಲೋ ಅಥವಾ ಇನ್ನಾವುದೋ ಕಾರಣಗಳಿಂದಲೋ ಈ ನಿಗೂಢ ಸತ್ಯವನ್ನು ಅರಿತುಕೊಳ್ಳುತ್ತಾರೆ. ಎಲ್ಲವನ್ನೂ ಸಮಭಾವದಿಂದ ಸ್ವೀಕರಿಸಿ, 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯವೊಂದಿರಲಿ' ಎಂಬ ಭಾವನೆಯಿಂದ ತಮ್ಮ ಇಹಲೋಕ ಯಾತ್ರೆ ಮುಗಿಸುತ್ತಾರೆ. ಆದರೆ ಹೆಚ್ಚಿನ ಜನ ತಮಗೆ ಬಂದ ಕಷ್ಟಗಳಿಗೆ ಕಾರಣ ತಿಳಿಯದೆ ರೋದಿಸುತ್ತ, ದಾರಿ ಕಾಣದೆ ಕಂಗಾಲಾಗಿ, ದೈವನಿಂದನೆ ಮಾಡುವವರೆಗೂ ತಮ್ಮ ಬುದ್ಧಿ-ಮನಸ್ಸುಗಳಿಗೆ ಸ್ವಾತಂತ್ರ್ಯ ನೀಡುತ್ತಾರೆ. ಆದರೆ ಇದರ ಹಿಂದಿರುವ ಸತ್ಯವನ್ನು ಮನಗಂಡ ಅನೇಕ ಸಾಧು, ಸಂತರ ವಾಣಿ ಇಲ್ಲಿ ಮನನಯೋಗ್ಯ.

ಆದಿಗುರು ಶಂಕರಾಚಾರ್ಯರು ಹೇಳಿದಂತೆ **'ಪುನರಪಿ ಜನನಂ ಪುನರಪಿ ಮರಣಂ'** ಎಂಬ ಮಾತು ಸತ್ಯಸ್ಯ ಸತ್ಯ. ಇದಕ್ಕೆ ಮೂಲಕಾರಣ ನಾವು ಹಿಂದೆ ಮಾಡಿರುವ ಪಾಪ, ಪುಣ್ಯಗಳು. ಅದು ಮಾತಿನಿಂದಾಗಲಿ, ಕಾರ್ಯದಿಂದಾಗಲಿ, ಮನಸ್ಸಿನಿಂದಾಗಲಿ ಅದರ ಪರಿಣಾಮ ಅನುಭವಿಸಿಯೇ ತೀರಬೇಕು. ನಾವು ಅನೇಕ ವರ್ಷಗಳ ಹಿಂದೆ ಮಾಡಿದ ಯಾವುದೋ ಒಂದು ಕರ್ಮದಿಂದ ಈಗ ಸುಖವನ್ನೋ ಅಥವಾ ದುಃಖವನ್ನೋ ಅನುಭವಿಸುವ ಸಕಾಲ ಬಂದಿರಬಹುದು. ಅದನ್ನು ಕೆಲವರು ನಂಬಬಹುದು, ಕೆಲವರು ನಂಬದೆ ಇರಬಹುದು. ಆದರೆ ಅದರ ಫಲವನ್ನು ಮಾತ್ರ ಅನು

ಭವಿಸಿಯೇ ತೀರಬೇಕು. ಇದಕ್ಕೆ ಶಾಸ್ತ್ರಗಳೇ ಆಧಾರ. ಇದಕ್ಕೆ ಸಂಬಂಧಪಟ್ಟಂತೆ ಅನೇಕ ನೈಜ ಘಟನೆಗಳನ್ನು 'ಬದುಕಲು ಕಲಿಯಿರಿ' ಎಂಬ ಗ್ರಂಥದಲ್ಲಿ ನೋಡಬಹುದು. ಪುನರ್ಜನ್ಮ ಸಿದ್ಧಾಂತ ಅನಾದಿ ಕಾಲದ್ದು. ಇದಕ್ಕೆ ವಿರೋಧವೂ ಅಷ್ಟೆ. ಅನೇಕ ಬಾರಿ ನಮಗರಿವಿಲ್ಲದಂತೆ ನಾವೇ ಏನೇನೋ ಹೇಳುತ್ತಿರುತ್ತೇವೆ, 'ಯಾವ ಜನ್ಮದ ಕರ್ಮವೋ ಏನೋ ಈಗ ಅನುಭವಿಸುತ್ತಿದ್ದೇವೆ' ಎಂದು. ಆದರೆ ನಮ್ಮ ಮನಸ್ಸು ಪರಿಶುದ್ಧವಾದಾಗ ಕೆಲವು ನಿಗೂಢ ಸತ್ಯಗಳು ಗೋಚರಿಸುತ್ತವೆ. ಇಂಥ ಕಷ್ಟಗಳಿಗೆ ಇದೇ ಕಾರಣ ಎಂದು ಖಡಾಖಂಡಿತವಾಗಿ ಹೇಳುವ ಸ್ಥಿತಿಗೆ ಇನ್ನೂ ವಿಜ್ಞಾನ ತಲುಪಿಲ್ಲ ಎಂದು ಹೇಳಬಹುದು. ಮುಂದೆ ಇದರ ಬಗ್ಗೆ ಸಂಶೋಧನೆ ನಡೆದು ಎಲ್ಲರೂ ತಮ್ಮ ತಮ್ಮ ಕಷ್ಟಗಳಿಗೆ ತಾವು ಮಾಡಿರುವ ಕರ್ಮವೇ ಕಾರಣ ಎಂದು ನಿಸ್ಸಂದೇಹವಾಗಿ ಒಪ್ಪುವ ಕಾಲ ಬರಬಹುದು.

ಕೆಲವು ಸಮಸ್ಯೆಗಳು ಹೋಮ, ಪೂಜೆ, ಔಷಧೋಪಚಾರಗಳಿಂದ ಗುಣವಾಗದೆ, ದುಃಖ ಅನುಭವಿಸುವುದೊಂದೇ ದಾರಿ ಎಂದು ಅನೇಕರ ಭಾವನೆ. ಆದರೆ ವೇದನೆ ಅನುಭವಿಸಿ ಕರ್ಮದ ಪರಿಣಾಮ ಕಡಿಮೆಯಾದಂತೆ, ವೇದನೆಯೂ ಕಡಿಮೆಯಾಗುತ್ತದೆ. ನಮ್ಮ ಹಿಂದಿನ ಜನ್ಮಗಳಲ್ಲಿ ಪುಣ್ಯಕಾರ್ಯಗಳನ್ನು ಮಾಡಿದ್ದರೆ, ನಾವು ಈ ಜನ್ಮದಲ್ಲಿ ಎಂತಹ ಕುಗ್ರಾಮದಲ್ಲಿ ಜನಿಸಿದರೂ ಸತ್ಕರ್ಮದ ಫಲದಿಂದ ಉತ್ತಮ ಜೀವನ ನಡೆಸುವುದರಲ್ಲಿ ಸಂದೇಹವಿಲ್ಲ. ಅನೇಕ ದುಷ್ಕರ್ಮಗಳನ್ನು ಮಾಡುತ್ತಿರುವ ಜನರನ್ನು ನಾವು ಪ್ರತಿದಿನ ನೋಡುತ್ತಲೇ ಇರುತ್ತೇವೆ. ಅವರು ಹೊರನೋಟಕ್ಕೆ ಸುಖವಾಗಿರುವುದನ್ನು ನೋಡಿ ನಮಗೆ ಆಶ್ಚರ್ಯವಾಗಬಹುದು. ಆದರೆ ಅವರ ಮಾನಸಿಕ ಸ್ಥಿತಿಯನ್ನು ಗಮನಿಸಿ ಅವರೊಡನೆ ಒಡನಾಡಿದಾಗ ಅವರ ನಿಜಸ್ಥಿತಿ ಅರಿವಾಗುತ್ತದೆ. 'Apperences are deceptive' ಎಂಬ ಮಾತು ಇಲ್ಲಿ ಮನನ ಯೋಗ್ಯ.

ಆದ್ದರಿಂದಲೇ ಪರಿಶುದ್ಧ ಸಾಧುಸಂತರು, ಗೃಹಸ್ಥರು ಸರಳ ಜೀವನಕ್ಕೆ ಪ್ರಾಮುಖ್ಯತೆ ನೀಡಿ, ಮಾನಸಿಕವಾಗಿ, ದೈಹಿಕವಾಗಿ ಒಳ್ಳೆಯ ಕೆಲಸಗಳನ್ನೇ ಮಾಡುತ್ತಾ ಸದಾಕಾಲ ಭಗವಂತನಿಗೆ ಶರಣಾಗಿ ಉತ್ತಮ ಜೀವನ ನಡೆಸಿ, ಅನೇಕರಿಗೆ ದಾರಿದೀಪವಾಗಿದ್ದಾರೆ. ಈ ಲೋಕದ ನಿಯಮವೇನೆಂದರೆ, ಇಲ್ಲಿ ಒಳ್ಳೆಯದನ್ನು ಮಾಡಿದರೆ ಮಾತ್ರ ಒಳ್ಳೆಯದಾಗುವುದು. ಇಂದು ನಾವು ಮಾಧ್ಯಮಗಳ ಸಹಾಯದಿಂದ ಅನೇಕ ವಿಚಾರಗಳನ್ನು ಮನೆಯಲ್ಲಿಯೇ ತಿಳಿಯಬಹುದು. ಅನೇಕರು ದುರ್ಮಾಗದಿಂದ ಹಣ ಗಳಿಸಿ ಕೆಲವೇ ವರ್ಷಗಳಲ್ಲಿ ಜೈಲು ಸೇರಿರುವ ವಿಚಾರಗಳನ್ನು ಕೇಳುತ್ತಿರುತ್ತೇವೆ. ಕೆಟ್ಟದ್ದನ್ನು ಮಾಡಿ ಒಳ್ಳೆಯದಾಗಲಿ ಎಂದು ಆಶಿಸುವುದು ಮೂರ್ಖತನ. ಅನಾಚಾರ ಮಾಡಿ, ಹಣಬಲದಿಂದ, ಜನಬಲದಿಂದ ನ್ಯಾಯಾಲಯದಿಂದ ಒಂದು ಪಕ್ಷ ತಪ್ಪಿಸಿಕೊಂಡರೂ ದುಷ್ಕರ್ಮದ ಫಲದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ನಮ್ಮ ಮನಸ್ಸನ್ನು ಸದಾಕಾಲ ಸರಿಯಾದ ದಾರಿಯಲ್ಲಿ ಪ್ರಚೋದಿಸುವಂತೆ ಪ್ರೇರೇಪಿಸಲು ಗಾಯತ್ರಿ ಮಂತ್ರದ ಪಠನೆಯ ಮೂಲಕ ಪ್ರಾರ್ಥಿಸುವ ವ್ಯವಸ್ಥೆಯನ್ನು ನಮ್ಮ ಋಷಿಮುನಿಗಳು ನಮಗೆ ನೀಡಿದ್ದಾರೆ. ಇದರ ಪ್ರಭಾವದಿಂದ ಸಜ್ಜನರ ಸಹವಾಸ, ಒಳ್ಳೆಯದನ್ನು ಮಾಡಲು ಪ್ರೇರಣೆ, ಭಗವತಿಯಲ್ಲಿ ಶ್ರದ್ಧೆ, ಗುರುವಿನ ಕೃಪೆ – ಎಲ್ಲವೂ ದೊರೆತು, ಈ ಪವಿತ್ರ ಮಾನವ ಜನ್ಮ ಸಾರ್ಥಕವಾಗಲು ಸಹಕಾರಿಯಾಗುತ್ತದೆ.

ಪ್ರಸ್ತುತ ಶೃಂಗೇರಿ ಪೀಠದ ಜಗದ್ಗುರುಗಳು ತಮ್ಮ ಉಪನ್ಯಾಸದಲ್ಲಿ ಹೇಳುತ್ತಾರೆ: ''ನೋಡಿ ನನ್ನ ಬಳಿ ಎಲ್ಲಾ ತರಹದ ಜನ ಬರುತ್ತಾರೆ. ರಾಜಕಾರಣಿಗಳು, ಗೃಹಸ್ಥರು, ವ್ಯಾಪಾರಿಗಳು, ಸಾಮಾನ್ಯರು ಇನ್ನೂ ಅನೇಕರು. ಅವರಲ್ಲಿ ಕೆಲವರು ಕೇಳುತ್ತಾರೆ, 'ಸ್ವಾಮೀಜಿ, ನಮಗೆ ಎಲ್ಲವೂ ಇದೆ, ಆದರೆ ಮನಶ್ಶಾಂತಿ ಇಲ್ಲ, ಏನು ಮಾಡುವುದು, ನೀವೇ ಹೇಳಿ' ಎಂದು. ಅದಕ್ಕೆ ನಾನು ವಿದ್ಯಾರ್ಥಿಯ ಉದಾಹರಣೆ ನೀಡುತ್ತೇನೆ. ನೋಡಿ, ವಿದ್ಯಾರ್ಥಿಯಾದವನು ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಬೇಕಾದರೆ ಕಷ್ಟಪಟ್ಟು ಓದಬೇಕು. ಅದನ್ನು ಬಿಟ್ಟು ಉಳಿದೆಲ್ಲಾ ಕೆಲಸಗಳನ್ನು ಮಾಡುತ್ತಿದ್ದರೆ ಮತ್ತು ಪುಸ್ತಕವನ್ನು ಮುಟ್ಟದೆಯೇ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಬೇಕೆಂದು ನಿರೀಕ್ಷಿಸಿದರೆ, ಅದು ಮೂರ್ಖತನವಲ್ಲವೆ? ಹೀಗಾಗಿದೆ ಇಂದು ಕೇಳುವ ಪ್ರಶ್ನೆ. ಧರ್ಮಮಾರ್ಗ ಅನುಸರಿಸದೆ ಮನಶ್ಶಾಂತಿ ಸಾಧ್ಯವಿಲ್ಲ. ಇದನ್ನು ಪದೇಪದೇ ಹೇಳುತ್ತಿದ್ದರೂ ಧರ್ಮಮಾರ್ಗವನ್ನು ಅನುಸರಿಸದಿದ್ದರೆ ಮನಶ್ಶಾಂತಿ ಸಿಗುವ ಬಗೆ ಹೇಗೆ? ಬೇವಿನ ಮರದ ಬೀಜವನ್ನು ಬಿತ್ತಿ, ಅದು ಮರವಾದ ಮೇಲೆ ಮಾವಿನ ಹಣ್ಣು ಬಿಡುತ್ತದೆ ಎಂದು ಕಾದು ಕುಳಿತರೆ, ಅದು ಎಂದಾದರೂ ಸಾಧ್ಯವೆ?''

ಸ್ವಾಮಿ ವಿವೇಕಾನಂದರು ಹೇಳಿದ್ದಾರೆ, ''ನಿಮ್ಮ ಯಶಸ್ಸಿನ ಶಿಲ್ಪಿಗಳು ನೀವೇ'' ಎಂದು. ಪ್ರತಿಯೊಬ್ಬರೂ ಅವರವರ ಜೀವನವನ್ನು ಅವಲೋಕಿಸಿದಾಗ ಇದರ ಮರ್ಮ ಸ್ವಲ್ಪವಾದರೂ ಅರಿವಾಗದೆ ಇರಲಾರದು. ಆದರೂ ನಾವು ಸನ್ಮಾರ್ಗವನ್ನು ನಿರ್ಲಕ್ಷಿಸಿ ದುರ್ಮಾರ್ಗವನ್ನು ಹಿಡಿದು ಜೀವನ ಹಾಳಾಗುವಂತೆ ಪ್ರಯತ್ನಪಡುತ್ತೇವೆ. 'Keeping the hand in fire and expecting not to be burnt' ಎಂಬ ಮಾತು ಇಲ್ಲಿ ಮನನಯೋಗ್ಯ. ಬೆಂಕಿಯಲ್ಲಿ ಕೈಯಿಟ್ಟರೆ ಅದು ಸುಡಲು ೧೦ ಸೆಕೆಂಡು ಸಾಕು. ಆದರೆ ಅದು ವಾಸಿಯಾಗಲು ೧೦ ದಿವಸಗಳೇ ಬೇಕಾಗಬಹುದು. ೧೦ ದಿನದಲ್ಲಿ ಎಷ್ಟು ಸೆಕೆಂಡಿದೆ! ಅದರಂತೆಯೇ ನಾವು ಹಿಂದೆ ಮಾಡಿರುವ ಧರ್ಮದ ಫಲ. ಆದರೆ ದಯಾಳುವಾದ ಭಗವಂತನು ನಾವು ಮಾಡಿರುವ ದುಷ್ಕರ್ಮದ ಫಲವನ್ನು ಒಂದೇ ಬಾರಿ ನೀಡಿದರೆ, ಅದನ್ನು ಸಹಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಸ್ವಲ್ಪ ಸುಖ, ಸ್ವಲ್ಪ ದುಃಖ ನೀಡಿ ನಮ್ಮ ಕರ್ಮ ಸವೆದು ಮುಕ್ತಿ ಹೊಂದಲು ಸಹಕಾರಿಯಾಗುವಂತೆ ಕರ್ಮನಿಯಮ ಮಾಡಿದ್ದಾನೆ. ಮತ್ತೆ ಮತ್ತೆ ಹುಟ್ಟಿ, ಕರ್ಮ ಸವೆದು ಮುಕ್ತಿ ಹೊಂದಬಹುದು. ಆದರೆ ಕರ್ಮಾಧ್ಯಕ್ಷನಾದ ಭಗವಂತನು ಕೃಪೆ ಮಾಡಿದರೆ ಈ ಕ್ಷಣವೇ ಮುಕ್ತಿ. ಆದರೆ ಅದಕ್ಕೂ ಸಕಾಲ ಬರಬೇಕು.

ಸಾಮಾನ್ಯವಾಗಿ ಎಲ್ಲರೂ ಹೇಳುವಂತೆ, ನಮ್ಮ ಅಜ್ಞಾನದ ದಿನಗಳಲ್ಲಿ ನಾವು ತಪ್ಪುಗಳನ್ನು ಮಾಡಿರಬಹುದು. ಅದು ನಮಗೆ